അപര ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಿ.ಸಿ.ನಂ.4732/2023

ಪಿ.ಡಬ್ಲ್ಯೂ -05

ಸಿ.ಡಬ್ಲ್ಯೂ-05

ಸಾಕ್ಷಿದಾರನ ಹೆಸರುಃ- ಹೆಚ್ ಬಿ ಶಿವಣ್ಣ

ತಂದೆಯ ಹೆಸರುಃ- ಲೇಟ್ ಬಸವರಾಜಯ್ಯ

ವಯಸ್ಸುಃ- 60 ವರ್ಷ

ಉದ್ಯೋಗಃ- ನಿವೃತ್ತ ಪಿ.ಎಸ್.ಐ

ವಾಸಃ- ಗುಬ್ಬಿ

**ಸಾಕ್ಷಿಗೆ ದಿಃ 12.08.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ನಾನು ಸಪ್ಟಂಬರ್ 2012 ರಿಂದ ಅಕ್ಟೊಬರ್ 2019 ರವೆಗೆ ತುಮಕೂರು ಲೋಕಾಯುಕ್ತ ಕಚೇರಿಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 29.07.2019 ರಂದು ನಾವು ಕಚೇರಿಗೆ ಬಳಿಗ್ಗೆ 10 ಗಂಟೆಗೆ ಕರ್ತವ್ಯಕ್ಕೆ ಹಾಜರಾದಾಗ ಚಾಸಾ 1 ಅವರು ನನ್ನನ್ನು ಹಾಗೂ ಚಾಸಾ 6 ಅವರನ್ನು ಕರೆದು ಈ ದಿನ ಕುಣಿಗಲ್ ತಾಲ್ಲೂಕು ಹು.ದುರ್ಗ ಹೋಬಳಿ ತಾವರೆಕೆರೆ ಗ್ರಾಮದ ಸೋಮಶೇಖರ ಅವರ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂಬ ಮಾಹಿತಿ ಬಂದಿದ್ದು ಮಾಹಿತಿಯನ್ನು ಗೌಪ್ಯವಾಗಿ ಇಡಿ ಎಂದು ಹೇಳಿ ನಂತರ ಸುಮಾರು 12 ಗಂಟೆಯ ಸಮಯದಲ್ಲಿ ನಮ್ಮನ್ನು ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋರಟಿರುತ್ತಾರೆ. ನಂತರ ಚಾಸಾ 1 ಅವರು ನಮ್ಮನ್ನು ಹು.ದುರ್ಗ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದು ನಂತರ ಹು.ದುರ್ಗ ಹೋ. ತಾವರೆಕೆರೆ ಗ್ರಾಮಕ್ಕೆ ಹೋಗಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಎದುರು 1 ಪೆಟ್ಟಿಗೆ ಅಂಗಡಿ ಕಂಡು ಬಂದಿದ್ದು ಸದರ ಅಂಗಡಿ ಯಾರದೆಂದು ಮಾಹಿತಿ ತಿಳಿಯಲಾಗಿ ಸದರಿ ಪೆಟ್ಟಿಗೆ ಅಂಗಡಿಯ ಹೊನ್ನೆಗೌಡನದೊಡ್ಡಿಯ ವಾಸಿ ಸೋಮಶೇಖರ ಬಿನ್ ರಾಮಣ್ಣ ಅವರು ಅಗಂಡಿ ಯಂದು ಗೊತ್ತಾಗಿರುತ್ತದೆ. ನಂತರ ಸದರಿ

ಅಂಗಡಿಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುವುದು ಕಂಡು ಬಂದಿರುವುದರಿಂದ ಚಾಸಾ 2 ಅವರಿಗೆ ಮಾಹಿತಿ ತಿಳಿಸಿ ಅವರಿಗೆ ಸ್ಥಳಕ್ಕೆ ಬರುವಂತೆ ಹೇಳಿರುತ್ತಾರೆ. ಆಗ ಚಾಸಾ 2 ಅವರು ತಾವು ಎಡಿಯಾರು ಬಳಿ ಇರುವುದಾಗಿ ಬರುತ್ತವೆಂದು ತಿಳಿಸಿರುತ್ತಾರೆ. ಸಂಜೆ ಸುಮಾರು ತಮ್ಮ ಸಿಬ್ಬಂದಿಯೊಂದಿಗೆ ತಾವರೆಕೆರೆ ಗ್ರಾಮಕ್ಕೆ ಬಂದಿರುತ್ತಾರೆ. ನಂತರ ಎಲ್ಲರೂ ಸೇರಿದಾಗ ತಾವರಕೆರೆ ಗ್ರಾಮದ ಬಲರಾಮೆಗೌಡ ಮತ್ತು ರಂಗಸ್ವಾಮಿ ಅವರನ್ನು ಹತ್ತಿರ ಕರೆದು ಚಾಸಾ 1 ಮತ್ತು 2 ತಮ್ಮನ್ನು ಅವರಿಗೆ ಪರಿಚಯ ಮಾಡಿಕೊಂಡು ಹೊನ್ನೆಗೌಡನದೊಡ್ಡಿ ಬಳಿ ಇರುವ ಸರ್ಕಾರಿ ಪ್ರೌಡಶಾಲೆಯ ಎದುರು ಸೋಮಶೇಖರ ಎನ್ನುವರ ಅಂಗಡಿಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ ದಾಳಿ ಮಾಡಬೇಕು ಮತ್ತು ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸಬೇಕು ಎಂದು ಹೇಳಿದ್ದು ಅವರು ಒಪ್ಪಿಕೊಂಡಿರುತ್ತಾರೆ. ನಂತರ ಪಂಚರನ್ನು ಅಧಿಕಾರಿಗಳು ತಮ್ಮ ಇಲಾಖಾ ವಾಹನದಲ್ಲಿ ಕುರಿಸಿಕೊಂಡು ಸೋಮಶೇಖರವ ಅವರ ಅಂಗಡಿಯ ಬಳಿ ಹೋಗಿ ಅಂಗಡಿಯಲ್ಲಿದ್ದ ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಲಾಗಿ ಸೋಮಶೇಖರ ಬಿನ್ ರಾಮಣ್ಣ 23 ವರ್ಷ ಹೊನ್ನೆಗೌಡನದೊಡ್ಡಿ ಗ್ರಾಮ ಎಂದು ತಿಳಿಸಿರುತ್ತಾರೆ. ಸದರಿ ವ್ಯಕ್ತಿಗೆ ಅಂಗಡಿಯ ಮುಂಭಾಗ ಮತ್ತು ಹಿಂಭಾಗ ಪ್ಲಾಸ್ಟಿಕ್ ಲೋಟಗಳು ಮತ್ತು ಟೆಟ್ರಾ ಪ್ಯಾಕೇಟಗಳು ಬಿದ್ದ ಬಗ್ಗೆ ಕೇಳಲಾಗಿ ನಿಮ್ಮ ಅಂಗಡಿಯಲ್ಲಿ ಅಭಕಾರಿ ವಸ್ತುಗಳನ್ನು ಸಂಗ್ರಹ ಮತ್ತು ಮಾರಾಟ ಮಾಡುತ್ತಿದ್ದೀರಿ ಎಂದು ಕೇಳಲಾಗಿ ಇಲ್ಲವೆಂದು ತಿಳಿಸಿರುತ್ತಾರೆ. ನಂತರ ಸದರಿ ಅಂಗಡಿಯ ಮರದ ಶೋಕೇಸ್ ಪರಿಶೀಲಿಸಲಾಗಿ 1 ಬಿಳಿ ಚೀಲದಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟಗಳು ಕಂಡು ಬಂದಿರುತ್ತವೆ. ಅದರಲ್ಲಿ 180 ಎಂ.ಎಲ್ ನ 1 ವಿಸ್ಕಿ ಟೆಟ್ರಾ ಪ್ಯಾಕೇಟ ಕಂಡು ಬಂದಿರುತ್ತದೆ. ಮತ್ತು ಓಟಿ  ವಿಸ್ಕಿಯ 90 ಎಂ.ಎಲ್ ನ 2 ಪ್ಯಾಕೇಟಗಳು ಕಂಡು ಬಂದಿರುತ್ತವೆ. 4 90 ಎಂ.ಎಲ್ ನ ಟೆಟ್ರಾ ಪ್ಯಾಕೇಟಗಳು ಕಂಡು ಬಂದಿರುತ್ತವೆ. ನಂತರ ಅಲ್ಲೆ ಇದ್ದ ಪ್ರಿಡ್ಜ ಮೇಲ್ಬಾಗದಲ್ಲಿ ಕಿಂಗಫಿಷರ್ ಕಂಪನಿಯ 500 ಎಂ.ಎಲ್ ನ 1 ಟಿನ್ ಮತ್ತು 330 ಎಂ.ಎಲ್ ನ 2 ಟಿನ್ ಗಳು ಕಂಡು ಬಂದಿರುತ್ತವೆ. ಸದರಿ ಅವುಗಳನ್ನು ಎಫ್.ಎಸ್.ಎಲ್ ಗೆ ಕಳುಹಿಸುವ ಕುರಿತು ಒಂದು ಬಿಳಿ ಬಣ್ಣದ ಚೀಲದಲ್ಲಿ ಹಾಕಿ 157 ಅಕ್ಷರದಿಂದ ಸೀಲ್ ಮಾಡಿ ವಶಕ್ಕೆ ಪಡೆದು  ಆರೋಪಿಯನ್ನು ವಶಕ್ಕೆ ಪಡೆದು ಚಾಸಾ 1 ಅವರು

ಉಕ್ತಲೇಖನದಂತೆ ಚಾಸಾ 6 ಅವರ ಬರವಣಿಗೆಯಲ್ಲಿ ಸಂಜೆ 6.45 ರಿಂದ 7.45 ರವರೆಗೆ ಸರ್ಕಾರಿ ವಾಹನ ಹೆಡ್ ಲೈಟ್ ಬೆಳಕಿನಲ್ಲಿ ಬರೆದು ಪಂಚರ ಮತ್ತು ಅಭಕಾರಿ ಅಧಿಕಾರಿಗಳ ಸಹಿ ಪಡೆದು ನಂತರ ನಾನು ಸಹ ಸಹಿ ಮಾಡಿರುತ್ತೇನೆ. ಆರೋಪಿ ಮತ್ತು ಮು. ಮಾ. ಗಳನ್ನು ಗುರುತಿಸುತ್ತೇನೆ. ಪಂಚನಾಮೆಗೆ ನನ್ನ ಸಹಿ ಇರುತ್ತದೆ ಅದನ್ನು ನಿ. ಪಿ 1(ಡಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತಪರಃ ಜಿ.ಎ.ಆರ್. ವಕೀಲರಿಂದಃ**

ಈ ಮೇಲೆ ಹೇಳಿದ ಎಲ್ಲಾ ವಿಚಾರವನ್ನು ಮಹಜರಲ್ಲಿ ಬರೆಯಲಾಗಿದೆಯೇ ಅದನ್ನು ಓದಿದ್ದಿರಾ ಎಂದರೆ ಸಾಕ್ಷಿ ಅದನ್ನು ಓದಿದ್ದು ಮಹಜರನಲ್ಲಿ ಬರೆಯಲಾಗಿದೆ ಮೇಲೆ ಹೇಳಿದ ಕೇಲವೊಂದು ಅಂಶಗಳನ್ನು ಹೊರತು ಪಡಿಸಿ ಎಂದು ಹೇಳುತ್ತಾರೆ. ನನ್ನ ಹೇಳಿಕೆಯನ್ನು ಚಾಸಾ 1 ಮತ್ತು 2 ಅವರು ಪಡೆದಿರುವುದಿಲ್ಲ. ನನ್ನ ಕರ್ತವ್ಯದ ಅವದಿ ಬೆಳಿಗ್ಗೆ 10 ರಿಂದ ಆಗಿರುತ್ತದೆ. ಚಾಸಾ 1 ಅವರು ನನಗೆ ಮಾಹಿತಿ ನೀಡಿದಾಗ ನಾನು ಕಚೇರಿಯಲ್ಲಿದ್ದೆ. ಮಾಹಿತಿ ನೀಡಿದಾಗ ಸಮಯ 10.30 ಗಂಟೆ ಆಗಿತ್ತು. ಆ ಸಮಯದಲ್ಲಿ ಚಾಸಾ 1 ಅವರು ಸೋಮಶೇಖರ ಎನ್ನುವವರ ಅಂಗಡಿಯಲ್ಲಿ ಮದ್ಯ ಮಾರಾಟದ ಬಗ್ಗೆ ತಿಳಿಸಿದ್ದರು. ಸದರಿ ದೂರನ್ನು ನನಗೆ ತೋರಿಸಿಲ್ಲ ಮತ್ತು ನಾನು ಇಲ್ಲಿಯವರೆಗೆ ಅದನ್ನು ನೋಡಿರುವುದಿಲ್ಲ.

ನಾವು ನಮ್ಮ ಕಚೇರಿಯನ್ನು 12 ಗಂಟೆಗೆ ಬಿಟ್ಟಿದ್ದು ನಮ್ಮ ಸರ್ಕಾರಿ ವಾಹನ ನಂ ಕೆ.ಎ 06 - ಜಿ-897 ಆಗಿರುತ್ತದೆ. ತುಮಕೂರನ್ನು ಬಿಟ್ಟು ತಾವರಕೆರೆ ಗ್ರಾಮಕ್ಕೆ ಬಂದಾಗ 2 ರಿಂದ 2.30 ಗಂಟೆ ಆಗಿತ್ತು. ತಾವರೆಕೆರೆ ಗ್ರಾಮಕ್ಕೆ ಹೋಗಬೇಕಾದರೆ ಹು.ದುರ್ಗಕ್ಕೆ ಹೋಗುವ ಅವಶ್ಯಕತೆ ಇರುವುದಿಲ್ಲವೆಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಹು.ದುರ್ಗ ದಿಂದ ಹೋಗುವಾಗ ತಾವರೆಕೆರೆ ಮೊದಲು ಸಿಗುತ್ತದೆಯಾ ಹೊನ್ನೆಗೌಡನದೊಡ್ಡಿ ಕ್ರಾಸ್ ಮೊದಲು ಸಿಗುತ್ತದೆಯಾ ಎಂದರೆ ಸಾಕ್ಷಿ ಗೊತ್ತಿಲ್ಲವೆಂದು ಹೇಳುತ್ತಾರೆ.

ತುಮಕೂರಿನಿಂದ ಬರುವಾಗ ಕುಣಿಗಲ್ ನಲ್ಲಿ ಅಭಕಾರಿ ಕಚೇರಿ ಇದ್ದು ಅಲ್ಲಿಗೆ ಬೇಟಿ ನೀಡಿರುವುದಿಲ್ಲ. ಕುಣಿಗಲ್ ನ್ಯಾಯಾಲಯದಲ್ಲಿ ಶೋದನಾ ವಾರೆಂಟ್ ಅನ್ನು ಪಡೆಯುವ ಪ್ರಯತ್ನ

ನಾನಾಗಲಿ ಚಾಸಾ 1 ಅವರು ಆಗಲಿ ಮಾಡಿರುವುದಿಲ್ಲ. ಹು.ದುರ್ಗದಲ್ಲಿ ಪೊ. ಠಾಣೆ ಇದ್ದು ಅವರಿಗೆ ಮಾಹಿತಿ ನೀಡಿ ತಾವರೆಕೆರೆ ಗ್ರಾಮ ಎಲ್ಲಿ ಬರುತ್ತದೆಂದು ವಿಚಾರ ಮಾಡಿದ್ದಿರಾ ಎಂದರೆ ಸಾಕ್ಷಿ ಪೋಲಿಸರಿಂದ ಮಾಹಿತಿ ಪಡೆದಿಲ್ಲ ಹು.ದುರ್ಗ ಬಸ್ ನಿಲ್ದಾಣದಲ್ಲಿದ್ದ ಸಾರ್ವಜನಿಕರಿಂದ ಪಡೆದಿರುತ್ತೇವೆಂದು ಹೇಳುತ್ತಾರೆ. ಆಗಲೂ ಸಹ ತಾವರೆಕೆರೆ ಮೊದಲು ಬರುತ್ತದೆಯಾ ಅಥವಾ ಹೊನ್ನೆಗೌಡನದೊಡ್ಡಿ ಕ್ರಾಸ್ ಮೊದಲು ಬರುತ್ತದೆಯೆಂದು ಗೊತ್ತಾಗಿರುವುದಿಲ್ಲ.

ಪೆಟ್ಟಿಗೆ ಅಂಗಡಿ ಬಳಿ ಹೋದಾಗ 3.45 ಗಂಟೆ ಆಗಿತ್ತು. ಸದರಿ ಪೆಟ್ಟಿಗೆ ಅಂಗಡಿಯ ಬಾಗಿಲು ಪೂರ್ವ ದಿಕ್ಕಿಗೆ ಇರುತ್ತದೆ. ಸದರಿ ಪೆಟ್ಟಿಗೆ ಯಾರಿಗೆ ಸೇರಿದ್ದು ಎಂದು ನಿಮಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿ ಸಾರ್ವಜನಿಕರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಅವರನ್ನು ಮಹಜರಗೆ ಸಾಕ್ಷಿಯನ್ನಾಗಿ ಮಾಡಿಲ್ಲವೆಂದರೆ ಸಾಕ್ಷಿ ಅವರಿಗೆ ಕರೆದಿರುವುದಿಲ್ಲವೆಂದು ಹೇಳುತ್ತಾರೆ. ನಾವು ಹೋದಾಗ 3-4 ಜನ ಸಾರ್ವಜನಿಕರು ಕುಳಿತುಕೊಂಡಿದ್ದು ಒಬ್ಬ ವ್ಯಕ್ತಿ ಅಂಗಡಿಯಲ್ಲಿದ್ದರು ಎಂದು ಹೇಳುತ್ತಾರೆ. ಚಾಸಾ 2 ಅವರಿಗೆ ಮಾಹಿತಿಯನ್ನು 4 ಗಂಟೆಗೆ ನೀಡಿರುತ್ತೇವೆ. ಆ ಸಮಯದಲ್ಲಿ ನಾವು ಯಾವುದನ್ನು ಶೋದನೆ ಮಾಡಿರುವುದಿಲ್ಲ ಮತ್ತು ವಶಕ್ಕೆ ಪಡೆದಿರುವುದಿಲ್ಲ ಕೇವಲ ನೋಡಿರುತ್ತೇವೆ. ಚಾಸಾ 2 ಅವರು ಅವರ ಸಿಬ್ಬಂದಿಯೊಂದಿಗೆ ಬರುವವರೆಗೆ ನಾವು ತಾವರೆಕೆರೆ ಗ್ರಾಮಕ್ಕೆ ಹೋಗಿದ್ದೇವು ಎಂದು ಹೇಳುತ್ತಾರೆ. ತಾವರೆಕೆರೆ ಗ್ರಾಮಕ್ಕೂ ಪೆಟ್ಟಿ ಅಂಗಡಿಗೂ 300 ಮೀಟರ ಅಂತರ ಇದೆ ಎಂದು ಹೇಳುತ್ತಾರೆ.

ತಾವರೆಕೆರೆ ಗ್ರಾಮಕ್ಕೂ ಪೆಟ್ಟೆ ಅಂಗಡಿಗೂ 3 ಕೀ ಮೀ ಅಂತರ ಇದ್ದು ನಾನು ಸ್ಥಳಕ್ಕೆ ಹೋಗಿಲ್ಲವೆಂದರೆ ಸರಿಯಲ್ಲ. ನಾವು ಹೋದಾಗ ಸದರಿ ಅಂಗಡಿಯಲ್ಲಿ ಯಾರಾದರೂ ಮದ್ಯ ಸೇವನೆ ಮಾಡುತ್ತಿದ್ದರಾ ಮತ್ತು ನೀರಿನ ಬಾಟಲ್ ಇದ್ದವೂ ಎಂದರೆ ಸಾಕ್ಷಿ ಮದ್ಯ ಸೇವನೆ ಯಾರು ಮಾಡುತ್ತಿರಲಿಲ್ಲವೆಂದು ಹೇಳುತ್ತಾರೆ. ಸದರಿ ಪೆಟ್ಟಿ ಅಂಗಡಿಯಲ್ಲಿ ಮದ್ಯವನ್ನು ಹೊರತು ಪಡಿಸಿ ಬೇರೆ ವಸ್ತುಗಳು ಸಹ ಇದ್ದರು. ಅಭಕಾರಿ ಅಧಿಕಾರಿಗಳು ಸ್ಥಳಕ್ಕೆ ಬಂದಾಗ ಸಮಯ 6.30 ಗಂಟೆ ಆಗಿರುತ್ತದೆ. ಅವರು ಬಂದಾಗ ಮು. ಮಾ. ಯಾವ ಜಿಲ್ಲೆ ಮತ್ತು ತಾಲ್ಲೂಕು ಮತ್ತು ಬ್ಯಾಚ್ ನಂ ಹೇಳಿರುವುದಿಲ್ಲ. ಈ ಬಗ್ಗೆ ನನಗೂ ಸಹ ಮಾಹಿತಿ ಇರುವುದಿಲ್ಲ.

ಸದರಿ ಮದ್ಯಕ್ಕೆ ಟ್ಯಾಕ್ಸ ವಿಧಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಮು. ಮಾ. ಗಳ ಬ್ಯಾಚ್ ನಂ ಮತ್ತು ಎಲ್ಲಿಗೆ ಸರಬರಾಜು ಆಗಿತ್ತು ಎಂದು ಚಾಸಾ 1 ಮತ್ತು 2 ಅವರು ಪಂಚನಾಮೆಯಲ್ಲಿ ಬರೆಸಿರುವುದಿಲ್ಲ.ಆಗತ್ತು ಜಪ್ತು ಮಾಡಿದ ಮು. ಮಾ. ಈ ದಿನ ನ್ಯಾಯಾಲಯದ ಮುಂದಿರುವ ಮು. ಮಾ. ಗಳು ಆಗಿರುತ್ತವೆ ಎಂದರೆ ಸರಿ. ನ್ಯಾಯಾಲಯದ ಮುಂದೆ 3 ಎಂ.ಸಿ ಬ್ರಾಂಡಿಯ ಟೆಟ್ರಾ ಪ್ಯಾಕೇಟಗಳು ಮಾತ್ರ ಇರುತ್ತವೆ ಎಂದರೆ ಸಾಕ್ಷಿ ಆ ದಿನ 4 ಅದನ್ನುಜಪ್ತು ಮಾಡಿದ್ದು ಈ ದಿನ ನ್ಯಾಯಾಲಯದಲ್ಲಿ 3 ಮಾತ್ರ ಇರುತ್ತದೆಂದು ಹೇಳುತ್ತಾರೆ. ನ್ಯಾಯಾಲಯದ ಮುಂದೆ ಇರುವ ಹೈವೂರ್ಡ್ಸ ಪಂಚ್ ಟೆಟ್ರಾ ಪ್ಯಾಕೇಟಗಳನ್ನು ನಾವು ಜಪ್ತು ಮಾಡಿರುವುದಿಲ್ಲ. ಅದನ್ನು ನ್ಯಾಯಾಲಯಕ್ಕೆ ಯಾರು ನೀಡಿದ್ದಾರೆಂದು ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಬಟ್ಟೆಯಲ್ಲಿ ನಾವು ಮು. ಮಾ. ಗಳನ್ನು ಜಪ್ತು ಮಾಡಿರುತ್ತೇವೆ.

ಆ ದಿನ ನಾನು ಸ್ಥಳಕ್ಕೆ ಹೋಗದೆ ಇರುವ ಕಾರಣ ನನಗೆ ಪ್ರಕರಣದ ಬಗ್ಗೆ ಏನು ಮಾಹಿತಿ ಇರುವುದಿಲ್ಲ ಮತ್ತು ಸದರಿ ಟೆಟ್ರಾ ಪ್ಯಾಕೇಟಗಳನ್ನು ಯಾರು ಹಾಕಿರುತ್ತಾರೆಂದು ಗೊತ್ತಿಲ್ಲವೆಂದರೆ ಸರಿಯಲ್ಲ. ಚಾಸಾ 1 ಅವರ ಸಮಕ್ಷಮವೇ ಮು. ಮಾ. ಅನ್ನು ಜಪ್ತು ಮಾಡಿರುತ್ತಾರೆ. ಅವರು ಸಹ ಸಹಿ ಮಾಡಿರುತ್ತಾರೆಂದು ಹೇಳುತ್ತಾರೆ. ಚಾಸಾ 1 ಅವರು ಸ್ಥಳದಲ್ಲಿ ಇರಲಿಲ್ಲ ಪಂಚನಾಮೆಗೆ ಸಹಿ ಮಾಡಿಲ್ಲವೆಂದರೆ ಸರಿಯಲ್ಲ. ಮಹಜರ ಸಮಯದಲ್ಲಿ ಚಾಸಾ 1 ಮತ್ತು 2 ಸ್ಥಳದಲ್ಲಿ ಇರಲಿಲ್ಲ ಕಚೇರಿಯಲ್ಲಿಯೇ ಇದ್ದೇವು ಎಂದರೆ ಸರಿಯಲ್ಲ. ಸ್ಥಳದಲ್ಲಿ ಇದ್ದ ಸಾರ್ವಜನಿಕರನ್ನು ಚಾಸಾ 2 ಅವರು ಪಂಚರಾಗಲು ಕರೆದಿರುತ್ತಾರೆ. ನಾನು ತಾವರೆಕೆರೆ ಗ್ರಾಮಕ್ಕೆ ಬೇಟಿ ನೀಡಿಲ್ಲ ಅಲ್ಲಿ ಯಾರು ಮದ್ಯವನ್ನು ಮಾರಾಟ ಮಾಡುತ್ತಿರಲಿಲ್ಲ ನಾನು ಮತ್ತು ಚಾಸಾ 1 ಅವರು ಸೇರಿ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**